ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ವಿಷ್ಣುವಿಗೆ ತುಳಸಿಪತ್ರೆ, ಶಿವನಿಗೆ ಬಿಲ್ವಪತ್ರೆ; ಯಮಧರ್ಮನಿಗೆ?*




ಸರ್ಕಾರಿ ಆಸಪತ್ರೆ ಎನ್ನುತ್ತಾರೆ ಡುಂಡಿ!

ಪಿ.ಜಿ. ರಾಘವೇಂದ್ರ, ಮೈಸೂರು

*ಇಂದಿನ ರಾಜಕೀಯವು ಮುಂದಿನ ಇತಿಹಾಸವಾಗಬಹುದೇ ರಾಮ್?*

ಇತಿಹಾಸವಾಗದಿದ್ದರೂ ಭೂ–ಗೋಳ (ಗೋಳಿನ) ಅಧ್ಯಾಯಗಳಂತೂ ಇರುತ್ತವೆ!

ಎಚ್.ಆರ್. ದೇಸಾಯಿ, ರಾಯಚೂರು

*ಸಮಯ ಎಲ್ಲವನ್ನೂ ನುಂಗುತ್ತದೆ. ಏನನ್ನು ಉಗುಳುತ್ತದೆ?*

ಸಮಯ ತೋರಿಸುವ ಗಡಿಯಾರದ ಮುಗಿದುಹೋದ ಸೆಲ್‌ಗಳನ್ನು!

ಸುರಭಿ ಎಂ.ಸಿ. ಇಂದ್ರ, ಬೆಂಗಳೂರು

*ಆತ್ಮಹತ್ಯೆಗೆ ಹತ್ತು ಎ ಗಳಾದರೆ ಷಡ್ಯಂತ್ರದ ಆರು ಯಂತ್ರಗಳು?*

ಭ್ರಷ್ಟಯಂತ್ರ, ದುಷ್ಟಯಂತ್ರ, ನಷ್ಟಯಂತ್ರ, ನೋಟುಯಂತ್ರ, ಮಾಟಯಂತ್ರ, ಅಭಿಯಂತ್ರ!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

*ಎಲ್ಲರೂ ಸತ್ಯವಂತರು, ಪ್ರಾಮಾಣಿಕರು ಆದರೆ ವಕೀಲರು ಮತ್ತು ಕೋರ್ಟುಗಳ ಗತಿ?*




ಚಿಂತಿಸಬೇಡಿ. ಭೂಮಿಯಲ್ಲಿ ಕಟ್ಟಕಡೆಯ ವಕೀಲ ಇರುವವರೆಗೆ ಎಲ್ಲರೂ ಸತ್ಯವಂತರು, ಪ್ರಾಮಾಣಿಕರು ಆಗುವ ಸ್ಥಿತಿ ಉದ್ಭವಿಸುವುದಿಲ್ಲ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಭಾಷ್ಪಾಂಜಲಿಗೂ, ಪುಷ್ಪಾಂಜಲಿಗೂ ಇರುವ ವ್ಯತ್ಯಾಸವೇನು?*

ಪುಷ್ಪಾಂಜಲಿ ಅರ್ಪಿಸಲು ಗ್ಲಿಸರಿನ್ ಅಗತ್ಯವಿಲ್ಲ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ರಾಜಕೀಯ ಮೈದಾನದಲ್ಲಿ ಬೌಂಡರಿಯೇ ಇಲ್ಲವಂತೆ?*

ನಿಜ. ಎಲ್ಲೆ ಇಲ್ಲದ ಎಮ್ಮೆಯೇ ಎಮ್ಮೆಲೆ!

ದೀಪಾ ವೆಂಕಟೇಶ ಮಹಾಲೆ, ಸಾಂಬ್ರಾಣಿ

*ಮೇಟಿ ವಿದ್ಯೆಯು ದಿನಗಳೆದಂತೆ ಮೂಲೆಗುಂಪಾಗಲು ಕಾರಣವೇನು?*

ಮೇ ಬದಲು ಊ ಜಾರಿಗೆ ಬಂದಿರುವುದರಿಂದ!

ಡಿ.ಎಲ್. ಶ್ವೇತ, ಚನ್ನಗಿರಿ

*ಮಾಜಿ ಶಾಸಕರಿಗೆ ನಿವೃತ್ತಿ ವೇತನ ನೀಡಲು ಅವರೇನು ರಾಜಕೀಯನಿವೃತ್ತಿ ಪಡೆದಿದ್ದಾರೆಯೇ?*

ಅದು ವೃತ್ತಿ– ನಿವೃತ್ತಿಗೆ ಸಂಬಂಧಿಸಿದ ಮಾತಲ್ಲ; ವಿಷದ ಹಾವಿಗೆ ಹಾಲೆರೆಯುವುದು ನಮ್ಮ ಸತ್ ಸಂಪ್ರದಾಯ!

ವಿ. ಹಮೀದ್, ವಿಟ್ಲ

*ಮಂಚಕ್ಕೆ ನಾಲ್ಕು ಕಾಲು; ಲಂಚಕ್ಕೆ...?*

ಕಾಲೇ ಇಲ್ಲ; ಬರೀ ಲಾವ್ ಲಾವ್ ಎನ್ನುವ ಕೈಗಳೇ!

ಅಮರಯ್ಯ ಪತ್ರಿಮಠ, ಸುರಪೂರ

*ನೈಸರ್ಗಿಕ ಪ್ರಕೋಪಗಳಿಂದ ನಾವು ಕಲಿಯಬೇಕಾದ ನೀತಿಯೇನು?*

ಪ್ರಕೃತಿ ಸ್ತ್ರೀ; ಆದ್ದರಿಂದ ಕೋಪ, ಪ್ರಕೋಪಗಳು ಸಹಜ ಎಂದು!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಶಾಲಾ ಪರೀಕ್ಷೆಗೂ, ಪ್ರೇಮ ಪರೀಕ್ಷೆಗೂ ಇರುವ ವ್ಯತ್ಯಾಸವೇನು?*

ಇಲ್ಲಿ ಪಾಸಾದರೆ ಕಾಲೇಜು, ಅಲ್ಲಿ ಪಾಸಾದರೆ ಮ್ಯಾರೇಜು.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಈ ವರ್ಷ ಅಂಬಾರಿ ಹೊರೋಕೆ ಸರಿಯಾದ ಆನೆ ಸಿಗದಿದ್ದರೆ ಏನು ಮಾಡ್ತಾರೆ?*

ಪುರಚ್ಚಿ ತಲೈವಿ ಜಯಲಲಿತಾಳನ್ನು ರಿಕ್ವೆಸ್ಟ್ ಮಾಡಿಕೊಳ್ಳುವರಂತೆ!

ಹಾಡ್ಯ. ಬಿ. ಜಯಾನಂದ, ಮೈಸೂರು

*ಹಿಂದೆ ಕವಿಗಳು ಹೆಣ್ಣನ್ನು ಬಳ್ಳಿಗೆ ಹೋಲಿಸುತ್ತಿದ್ದರು. ಈಗ?*

ಅದೇ ಬಳ್ಳಿಯಲ್ಲಿ ಬಿಡುವ ಕುಂಬಳಕಾಯಿಗೆ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ನಲ್ಲೆ ಮುನಿಸಿಕೊಂಡರೆ ನಲ್ಲನ ಸಾಂತ್ವನ; ರಾಜಕಾರಣಿ ಮುನಿಸಿಕೊಂಡರೆ?*

ರೆಸಾರ್ಟಿಗೆ ಆಹ್ವಾನ!

## ಬಹುಮಾನಿತ ಪ್ರಶ್ನೆ

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಪುರೋಹಿತರು ಜಾತಕಗಳನ್ನು ಹೊಂದಿಸಿಕೊಟ್ಟರೂ ದಂಪತಿಗಳಲ್ಲಿ ಹೊಂದಾಣಿಕೆ ಇರುವುದಿಲ್ಲವಲ್ಲಾ...?*

ಪುರೋಹಿತರದೇ ತಪ್ಪು; ಅವರು ಹೊಂದಿಸಿಕೊಡಬೇಕಾದ್ದು ಸತಿ– ಪತಿಯರ ಜಾತಕವನ್ನಲ್ಲ, ಅತ್ತೆ–ಸೊಸೆಯರದು!

ದೇಶವಳ್ಳಿ ಶಿವು, ಸಂತೇಮರಹಳ್ಳಿ

*ಬಿಡುಗಡೆ, ಬೇಲುಗಳಿಲ್ಲದ ಜೈಲು ಬಂದರೆ ಅಪರಾಧಗಳು ಸುಧಾರಿಸುತ್ತಾ...?*

ಈ ದೇಹವೇ ಆತ್ಮಕ್ಕೆ ಬಿಡುಗಡೆ, ಬೇಲುಗಳಿಲ್ಲದ ಜೈಲು; ಯುಗಯುಗಗಳೇ ಕಳೆದರೂ ಆತ್ಮವಂಚನೆ ತಪ್ಪಿಲ್ಲವಲ್ಲ!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಸರ್ಕಾರಿ ರಜೆ; ಇದರ ನಿಜವಾದ ಅರ್ಥ?*

ಅಧಿಕೃತ ಚಕ್ಕರ್!

ಬಿ.ಎನ್. ಸೊಲ್ಲಾಪುರ, ಬೀದರ್

*ಬ್ರಿಟಿಷರು ಭಾರತ ಆಳಿದ್ದಕ್ಕೂ, ಇಂದು ಭಾರತದಲ್ಲಿರುವ ಆಳ್ವಿಕೆಗೂ ಏನು ವ್ಯತ್ಯಾಸ?*



ಹೆಚ್ಚೇನಿಲ್ಲ; ಆಗ ಇಂಗ್ಲೆಂಡಿನ ರಾಣಿ ಆಳುತ್ತಿದ್ದಳು, ಈಗ ಇಟಲಿಯ ರಾಣಿ ಆಳುತ್ತಿದ್ದಾಳೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಹೆಂಗಸರೇಕೆ ತಾಳಿಯನ್ನು ಎಲ್ಲರಿಗೂ ಕಾಣುವಂತೆ ಧರಿಸುತ್ತಾರೆ?*

ತಾಳಿ, ನಿಲ್ಲಿಸಿ ನಿಮ್ಮ ನೋಟದ ದಾಳಿ ಎಂದು ಸೂಚಿಸಲು!

ಎಂ.ಎನ್. ಸೋಮಶೇಖರ್, ಮೈಸೂರು

*ಜೀವನದಲ್ಲಿ ಉಪ್ಪಿಗಿಂತಲೂ ರುಚಿಯಾದುದು ಯಾವುದು?*

ಉಪ್ಪಿನಕಾಯಿ!

ಎಚ್. ಸಿದ್ಧಾರ್ಥ ಹೆಬ್ಬಾರ, ಈದು

*ಬದುಕಿನಲ್ಲಿ ಊಹಿಸಲಾಗದ ತಿರುವು ಯಾವುದು?*

ಆಟೋಗಳು ತೆಗೆದುಕೊಳ್ಳುವ ತಿರುವು!

■ ರಾಮ್